**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ತಳವಾರ ಸಾಬಣ್ಣಾ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿರುವ ವಿಷಯಕ್ಕೆ ಉತ್ತರ.</u>**

*****

**ವಿಷಯ: ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮೆ|| ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ಮಳಖೇಡ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ರೈತರಿಂದ ಫಲವತ್ತಾದ ಕೃಷಿ ಜಮೀನುಗಳನ್ನು ಖರೀದಿಸಿ, ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವ ಕುರಿತು.**

*****

ಸನ್ಮಾನ್ಯ ಸಭಾಪತಿಗಳೇ, ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮೆ|| ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ರಾಜಶ್ರೀ ಸಿಮೆಂಟ್ ವರ್ಕ್ಸ್, ಆದಿತ್ಯ ನಗರ, ಮಳಖೇಡ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಊಡಗಿ, ಹೂಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಫಲವತ್ತಾದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವ ಬಗ್ಗೆ ವಿಜಯ ಕರ್ನಾಟಕ, ಪ್ರಜಾವಾಣಿ, ವಿಜಯವಾಣಿ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಟ್ರಾಟೆಕ್ ಸಿಮೆಂಟ ನಾಲ್ಕನೇ ಘಟಕಕ್ಕಾಗಿ ಸರ್ಕಾರ 999 ಎಕರೆ ಜಮೀನು ಖರೀದಿ ಮಾಡಲು 2010 ರಲ್ಲಿ 572 ಎಕರೆ 24 ಗುಂಟೆ ಹಾಗೂ 2011 ರಲ್ಲಿ 425 ಎಕರೆ 30 ಗುಂಟೆ ಜಮೀನುಗಳ ಅಧಿಸೂಚನೆ ಹೊರಡಿಸಿದೆ. ಜಮೀನು ಖರೀದಿಗೆ ಮಂಜೂರಾತಿ ನೀಡುವಾಗ ಸಾರ್ವಜನಿಕ, ರೈತರ ಹಿತಾಸಕ್ತಿ ವಿಷಯಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿರುವುದಿಲ್ಲ. ಇದು ಭೂ ಅಧಿನಿಯಮ 1961 ಕಲಂ 109(1) ಎ ರ ಸ್ಪಷ್ಟ ಉಲ್ಲಂಘನೆಯಾಗಿದೆ. ಕಂಪನಿಯವರು ಸರ್ಕಾರದ ಬೀಳು ಭೂಮಿಗೆ ರೂ.8,00,000/- ರಂತೆ ಖರೀದಿಸಿ, ರೈತರ ಫಲವತ್ತಾದ ಕೃಷಿ ಜಮೀನುಗಳಿಗೆ ರೂ.3,50,000/-ನೀಡಿ ರೈತರಿಗೆ ವಂಚನೆ ಮಾಡಿರುತ್ತಾರೆ. ಸೇಡಂ ತಾಲೂಕಿನ ನೀಲಹಳ್ಳಿ, ಕೊಂಕನಹಳ್ಳಿ ಮತ್ತು ಬೀರನಳ್ಳಿ ಗ್ರಾಮಗಳಲ್ಲಿ ದಾಲ್ಮೀಯಾ ಸಿಮೆಂಟ ಕಂಪನಿಯವರು 2008 ರಲ್ಲಿಯೇ ರೈತರ ಫಲವತ್ತಾದ ಕೃಷಿ ಜಮೀನುಗಳಿಗೆ ರೂ.8,00,000/- ರಂತೆ ಖರೀದಿಸಿದ್ದಾರೆ ಹಾಗೂ ಭೂಮಿ ಕಳೆದುಕೊಂಡ ರೈತರ ಕುಟುಂಬಗಳಿಗೆ ಉದ್ಯೋಗವನ್ನು ನೀಡಿರುತ್ತಾರೆ. ಅಲ್ಟ್ರಾಟೆಕ್ ಸಿಮೆಂಟ ಲಿಮಿಟೆಡ್ ಕಂಪನಿಯವರು ರೈತರ ಕುಟುಂಬದ ಸದಸ್ಯರಿಗೆ ಡಾ. ಸರೋಜಿನಿ ಮಹಿಷಿ ವರದಿಯಂತೆ ವಿದ್ಯಾರ್ಹತೆಗೆ ಅನುಗುಣವಾಗಿ ಕಂಪನಿಯಲ್ಲಿ ಖಾಯಂ ಉದ್ಯೋಗ ನೀಡಲು ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿಯವರು 2012ರಲ್ಲಿ ಆದೇಶಿಸಿದ್ದರು ಕಂಪನಿಯವರು ಭೂಮಿ ಕಳೆದುಕೊಂಡ ರೈತರ ಕುಟುಂಬಗಳಿಗೆ ಉದ್ಯೋಗ ನೀಡಿರುವುದಿಲ್ಲ. ಕಂಪನಿಯವರು ಜಿಲ್ಲೆಯ ಭೂಮಿ, ಅದಿರು, ನೀರು, ಇನ್ನಿತರ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರೆ ಕಂಪನಿಯವರು ರೈತರ ಮತ್ತು ಸಾರ್ವಜನಿಕ ಹಿತ ಕಾಯುತ್ತಿಲ್ಲ. ಇದಕ್ಕಾಗಿ ಭೂಮಿ ಕಳೆದುಕೊಂಡ ರೈತರು 2015ರಿಂದ 2020ರ ವರೆಗೆ ಸೇಡಂನ ಸಹಾಯಕ ಆಯುಕ್ತರ ಕಛೇರಿಯ ಎದುರುಗಡೆ ಚಳಿ, ಮಳೆ, ಗಾಳಿ ಲೆಕ್ಕಿಸದೇ 1712 ದಿನಗಳ ಧರಣಿ ಸತ್ಯಾಗ್ರಹ ಮಾಡಿರುತ್ತಾರೆ. ಈ ಧರಣಿಯಲ್ಲಿ 22 ಜನ ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೆ ರೈತರು ನಿರಂತರವಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಕೈಗಾರಿಕಾ ಸಚಿವರನ್ನು ಸಂಪರ್ಕಿಸಿ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸೇಡಂ ಹಾಗೂ ಕಲಬುರಗಿಯಲ್ಲಿ ರೈತರಿಗೆ ನ್ಯಾಯ ಒದಗಿಸಲು ಮನವಿ ಸಲ್ಲಿಸಲಾಗಿತ್ತು. ಆದರೆ, ಇಲ್ಲಿಯವರೆಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಇದು ಕಂಪನಿಯ ರೈತ ವಿರೋಧಿ ಧೋರಣೆಯನ್ನು ತೋರಿಸುತ್ತದೆ. ಈ ಹಿನ್ನಲೆಯಲ್ಲಿ, ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರ ಜಮೀನುಗಳಿಗೆ ಪರಿಹಾರದ ಉಳಿದ ಮೊತ್ತ ರೂ.4.50 ಲಕ್ಷ ನೀಡಬೇಕು. ಧರಣಿ ನಿರತ ರೈತರು ಪ್ರಾಣ ಕಳೆದುಕೊಂಡಿದ್ದರಿಂದ ಪ್ರತಿ ಕುಟುಂಬಕ್ಕೆ ರೂ.10 ಲಕ್ಷ ಪರಿಹಾರ ನೀಡಬೇಕು. ಡಾ. ಸರೋಜಿನಿ ಮಹಿಷಿ ವರದಿಯ ಆದೇಶದಂತೆ ಕಂಪನಿಯು ಭೂಮಿ ಕಳೆದುಕೊಂಡ ಪ್ರತಿ ರೈತರ ಕುಟುಂಬಕ್ಕೆ ಒಂದು ಖಾಯಂ ಉದ್ಯೋಗ ನೀಡಬೇಕೆಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

## <u>ಉತ್ತರ</u>

ಸರ್ಕಾರದ ಆದೇಶ ಸಂಖ್ಯೆ ಸಿಐ/30/ಎಸ್‌ಪಿಐ/2010, ದಿನಾಂಕ 25.02.2010 ರಲ್ಲಿ ಮೆ|| ರಾಜಶ್ರೀ ಸಿಮೆಂಟ್ಸ್ ಲಿ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ ಈ ಘಟಕಕ್ಕೆ ಸಿಮೆಂಟ್ ಘಟಕ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಸದರಿ ಯೋಜನೆಗೆ 573.15 ಎಕರೆ ಘಟಕ ಸ್ಥಾಪನೆಗೆ ಭೂಮಿ ಮತ್ತು 398.23 ಎಕರೆ ಮೈನಿಂಗ್ ಭೂಮಿಯನ್ನು ಕೆ.ಎಲ್.ಆರ್ ಕಾಯ್ದೆಯಡಿ ಖರೀದಿಸಲು ಅನುಮೋದನೆ ನೀಡಲಾಗಿದೆ.

ಸದರಿ ಕಂಪನಿಯು ಕಂದಾಯ ಇಲಾಖೆಯಿಂದ ಅಧಿಸೂಚನೆ ಸಂಖ್ಯೆ. ಕಂಇ 76 ಎಲ್ ಆರ್ ಎಂ 2010, ದಿನಾಂಕ 27.11.2010 ರಲ್ಲಿ ಒಟ್ಟು **572 ಎಕರೆ 24 ಗುಂಟೆ** ಮತ್ತು ಅಧಿಸೂಚನೆ ಸಂಖ್ಯೆ. ಕಂಇ 81 ಎಲ್ ಆರ್ ಎಂ 2010, ದಿನಾಂಕ 25.01.2011 ರಲ್ಲಿ **383 ಎಕರೆ 39 ಗುಂಟೆ** ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ಕಾಲಂ 109 ರಡಿ ಖರೀದಿಸಲು ಅನುಮತಿ ಪಡೆದಿರುತ್ತದೆ.

ನಂತರದಲ್ಲಿ ಘಟಕದ ಹೆಸರನ್ನು ಮೆ|| ಅಲ್ಟ್ರಾಟೆಕ್ ಸಿಮೆಂಟ್ಸ್ ಎಂದು ಬದಲಾವಣೆ ಮಾಡಿಕೊಂಡಿರುತ್ತದೆ.

KLR ಕಾಯ್ದೆ ಸೆಕ್ಷನ್ 109ರಡಿ ಮೆ|| ಅಲ್ಟ್ರಾಟೆಕ್ ಸಿಮೆಂಟ್ ಘಟಕಕ್ಕೆ ಅನುಮತಿ ನೀಡಿದ ನಂತರ ಘಟಕದವರು ಭೂಮಾಲೀಕರನ್ನು ಸಂಪರ್ಕಿಸಿ ಅವರೊಂದಿಗೆ ವಿವರವಾದ ಮಾತುಕತೆಯ ನಂತರ 921 ಎಕರೆ ಭೂಮಿಯನ್ನು ಖರೀದಿಸಲು ಅವರೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು, ಇಬ್ಬರೂ ಪರಸ್ಪರ ಒಪ್ಪಿಕೊಂಡು ಎಕರೆಗೆ ರೂ.3.50.000/- ಮಾರಾಟ ಪತ್ರ ಎಂದು ನಿರ್ಧರಿಸಲಾಗಿದೆ. ಸದರಿ ಸಂದರ್ಭದಲ್ಲಿ ಮಾರುಕಟ್ಟೆಯ ದರ ಪ್ರತಿ ಎಕರೆಗೆ ರೂ.70,000/- ಮೌಲ್ಯವಿರುತ್ತದೆ.

ಭೂಮಾಲೀಕರೊಂದಿಗೆ ಮಾತುಕತೆ ಸಂದರ್ಭದಲ್ಲಿ, ರೈತರು ಭೂಮಿಯನ್ನು ಘಟಕದವರಿಗೆ ಮಾರಾಟ ಮಾಡಲು ಒಪ್ಪಿಕೊಂಡ ಭೂಮಾಲೀಕರ ಕುಟುಂಬದ ಒಬ್ಬ ವ್ಯಕ್ತಿಗೆ ಉದ್ಯೋಗವನ್ನು ಒದಗಿಸಬೇಕೆಂಬ ಭೂಮಾಲೀಕರ ಈ ಬೇಡಿಕೆಯನ್ನು ಘಟಕದವರು ಒಪ್ಪಿರುವುದಿಲ್ಲ, ಹಾಗೂ ದೀರ್ಘ ಮಾತುಕತೆಗಳ ನಂತರ, ಭೂ ಮಾಲೀಕರು ಉದ್ಯೋಗದ ಬೇಡಿಕೆಗೆ ಬದಲಾಗಿ ಎಕರೆಗೆ ರೂ.2,75,000/- ಹೆಚ್ಚುವರಿ ಮಾರಾಟ ಪರಿಗಣನೆಗೆ ಒಪ್ಪಿಕೊಂಡರು. ಅದರಂತೆ, ಮೆ|| ಅಲ್ಟ್ರಾಟೆಕ್ ಸಿಮೆಂಟ್ ಘಟಕದವರು ಮತ್ತು ಭೂ ಮಾಲೀಕರು ಮಾರಾಟ ಒಪ್ಪಂದವನ್ನು ಮಾಡಿಕೊಂಡು, ಎಕರೆಗೆ ರೂ.3,50,000/- ಮಾರಾಟ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ರೂ.2.75.000/- ಹೆಚ್ಚುವರಿ ಮಾರಾಟ ಪರಿಗಣನೆಯನ್ನು ಎಕ್ಸ್-ಗ್ರೇಷಿಯವಾಗಿ ಸ್ವೀಕರಿಸಲು ಒಪ್ಪಿಕೊಂಡಿರುತ್ತಾರೆ ಮತ್ತು ಆ ಪರಿಣಾಮಕ್ಕೆ ಅಫಿಡವಿಟ್‌ಗಳನ್ನು ಸಹ ಸಲ್ಲಿಸಿದ್ದಾರೆ.

ಭೂಪರಿಹಾರ ಸ್ವೀಕರಿಸಿದ ನಂತರವೂ ಕೆಲವು ಭೂಮಾಲೀಕರು ಮಾರಾಟ ವಹಿವಾಟನ್ನು ಪೂರ್ಣ ಗೊಳಿಸಲು ಮುಂದೆ ಬರದೆ, ಹೆಚ್ಚುವರಿ ಹಣಕಾಸಿನ ಪರಿಹಾರವನ್ನು ಕೋರಿರುತ್ತಾರೆ. ಭೂಮಾಲೀಕರು ಮತ್ತು ಘಟಕದವರ ದೀರ್ಘ ಚರ್ಚೆಗಳ ನಂತರ ಪ್ರತಿ ಎಕರೆಗೆ ಪುನಃ ರೂ.1.75,000/- ನಷ್ಟು ಹೆಚ್ಚುವರಿ ಪರಿಹಾರ ಮೊತ್ತವನ್ನು ಪಾವತಿಸಲು ಪರಸ್ಪರ ಒಪ್ಪಿಕೊಂಡು MOU ಮಾಡಿಕೊಳ್ಳಲಾಗಿದೆ. ಭೂಮಾಲೀಕರಲ್ಲಿ ಕೆಲವರು ಮಾತ್ರ ಹೆಚ್ಚುವರಿ ಪರಿಹಾರ ಪಾವತಿಯನ್ನು ಕೋರಿದ್ದರೂ ಸಹ, ಘಟಕದವರು ಹೆಚ್ಚುವರಿ ಪರಿಹಾರ ಮೊತ್ತವನ್ನು ಬೇಡಿಕೆ ಇಡದ ಭೂ ಮಾಲೀಕರಿಗೂ ಸಹ ಹೆಚ್ಚುವರಿ ಪರಿಹಾರ ಮೊತ್ತವನ್ನು ಪಾವತಿಸಿದೆ.

ಮೇಲೆ ವಿವರಿಸಿರುವಂತೆ ರೂ. 8 ಲಕ್ಷಗಳ (ರೂ.3.50.000/- ಮಾರಾಟ ಪತ್ರ ಮತ್ತು ರೂ.4.50,000/- ಎಕ್ಸ್-ಗ್ರೇಷಿಯ) ಪೂರ್ಣ ಮಾರಾಟ ಪರಿಗಣನೆಯನ್ನು ಸ್ವೀಕರಿಸಿದ ನಂತರ, ಭೂಮಾಲೀಕರು ಘಟಕದ ಪರವಾಗಿ ಮಾರಾಟ ಪತ್ರಗಳನ್ನು ನೋಂದಾಯಿಸಿರುತ್ತಾರೆ.

2011ರಲ್ಲಿ ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಹಾಗನಹಳ್ಳಿ ಗ್ರಾಮದಲ್ಲಿ 24.09 ಎಕರೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಲು ಘಟಕವು ಗುಲ್ಬರ್ಗದ ಜಿಲ್ಲಾಧಿಕಾರಿ ಕಚೇರಿಗೆ ಎಕರೆಗೆ ರೂ.8,00,000/- ಗಳಂತೆ ಒಟ್ಟು ರೂ.1,93,80,000/- ಗಳನ್ನು ಪಾವತಿಸಿದೆ. ಅದರಂತೆ, ಕೆಲವು ವ್ಯಕ್ತಿಗಳು ಹಾಗನಹಳ್ಳಿ ಮತ್ತು ನೃಪತುಂಗನಗರ ಗ್ರಾಮಗಳಲ್ಲಿ ಮೆ|| ಅಲ್ಟ್ರಾಟೆಕ್ ಸಿಮೆಂಟ್ ಘಟಕವು ಸದರಿ ಗ್ರಾಮಗಳ ರೈತರಿಂದ ಎಕರೆಗೆ ರೂ.3,50,000/- ಗಳಂತೆ ಭೂಮಿಯನ್ನು ಖರೀದಿಸಿರುತ್ತದೆ ಎಂದು ಆರೋಪಿಸಿ, ಸರ್ಕಾರಿ ಭೂಮಿಗೆ ಎಕರೆಗೆ ರೂ.8,00,000/- ಗಳನ್ನು ಪಾವತಿಸಿ ಗ್ರಾಮದ ರೈತರಿಗೆ ಮೋಸ ಮಾಡಿದೆ ಎಂದು ಹಾಗೂ ಭೂಮಿಯನ್ನು ಖರೀದಿಸಿದ ರೈತರಿಗೆ 15% ಬಡ್ಡಿಯೊಂದಿಗೆ ಎಕರೆಗೆ 4,50,000/- (ನಾಲ್ಕು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಮೊತ್ತವನ್ನು ಪಾವತಿಸಬೇಕೆಂದು ಒತ್ತಾಯಿಸಲಾಗಿದೆ.

ಪ್ರಸ್ತುತ, ಈ ಘಟಕವು ಒಟ್ಟು 1,701 ಜನರಿಗೆ ಉದ್ಯೋಗ ನೀಡಿದ್ದು, ಈ ಪೈಕಿ 1,386 ಸ್ಥಳೀಯರಿಗೆ ಉದ್ಯೋಗ ನೀಡಿರುತ್ತಾರೆ. ಒಟ್ಟಾರೆ 81.48% ಸ್ಥಳೀಯರು ಕಾರ್ಯನಿರ್ವಹಿಸುತ್ತಿರುತ್ತಾರೆ.

**ಸಂಖ್ಯೆ ಸಿಐ 100 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು